# ನವಿಲುಗನ್ನಡಿ

- 2023ರ ಕೊನೆಯ ಸಂಚಿಕೆ ಸೊಗಸಾಗಿ ಮೂಡಿ ಬಂದಿದೆ. ರಹಮತ್ ತರೀಕೆರೆ ಅವರ 'ಬೀದಿಸಾಹಿತ್ಯದ ಕಷ್ಟಸುಖಗಳು' ಪ್ರಬಂಧ ಮನುಷ್ಯನ ಮನಸು, ಬುದ್ಧಿ, ಚಿತ್ತಗಳು ತೆರೆಮರೆಯಲ್ಲಿ ಹೇಗೆಲ್ಲಾ ಕೆಲಸ ಮಾಡುತ್ತವೆ ಎನ್ನುವುದನ್ನು ಅರ್ಥವತ್ತಾಗಿ ಕಟ್ಟಿಕೊಟ್ಟಿದೆ.

**ರಾಜೇಂದ್ರ ಹೆಗಡೆ, ಹಾವೇರಿ**

- ವಿಶಿಷ್ಟ ಲೇಖನ, ಕಥೆ, ಸಂದರ್ಶನ, ಕವಿತೆಗಳನ್ನು ಒಳಗೊಂಡ ಡಿಸೆಂಬರ್ ಸಂಚಿಕೆ ಮುದನೀಡಿತು. ಕಲೀಮ್ ಉಲ್ಲಾ ಅವರ 'ಉಪ್ಪು ನೀರಿನ ವಿಸ್ಮಯ ಹಕ್ಕಿಗಳ ದಿನಚರಿ' ಪಕ್ಷಿ ಪ್ರಪಂಚದ ಅಪರೂಪದ ಮಾಹಿತಿಯನ್ನು ಹೆಕ್ಕಿ ಕೊಟ್ಟಿದೆ. ತಮ್ಮ ಪುಟ್ಟ ಮೆದುಳಿನಲ್ಲಿ ಗೂಗಲ್ ಮ್ಯಾಪ್ ಪ್ರತಿಷ್ಠಾಪಿಸಿಕೊಂಡಿರುವ ಖಗಗಳ ಕೌಶಲ ಅದ್ಭುತ.

**ಎಂ.ಜಿ. ರಂಗಸ್ವಾಮಿ, ಹಿರಿಯೂರು**

**ಜಯತೀರ್ಥ ಶ್ರೀಪತಿ, ಹುಬ್ಬಳ್ಳಿ**

- ರಹಮತ್ ತರೀಕೆರೆ ಅವರ 'ಬೀದಿಸಾಹಿತ್ಯದ ಕಷ್ಟಸುಖಗಳು' ಬರಹ ಓದಿದ ಮೇಲಿಂದ ರಸ್ತೆಯಲ್ಲಿ ಓಡಾಡುವಾಗ ವಾಹನ ಬರಹ ಓದುವ ಹೊಸ ಅಭ್ಯಾಸ ಶುರುವಾಗಿದೆ. ಓದುವಾಗ ಪದಪದಗಳಲ್ಲೂ 'ಅರೇ! ಹೌದಲ್ಲ!' ಎನ್ನುವಂತೆ ಮಾಡಿದ ಬರಹವಿದು. ಅಷ್ಟೇ ಅಲ್ಲ, ಮಕ್ಕಳ ಗೋಡೆ ಬರಹಗಳನ್ನು ಪ್ರೀತಿಸುವಂತೆ ಮಾಡಿದ ಬರಹ.

**ಸಿದ್ದಯ್ಯ ಮಠಪತಿ, ವಿಜಯಪುರ**

- 'ಬೀದಿ ಸಾಹಿತ್ಯದ ಕಷ್ಟ ಸುಖಗಳು' ಲೇಖನ ಬೀದಿ ಬರಹಗಳ ಬಗ್ಗೆ ಗಂಭೀರವಾಗಿ ಯೋಚಿಸಲು ಪ್ರೇರೇಪಿಸುತ್ತದೆ. ಈ ಸ್ವಭಾವ ನಮ್ಮಲ್ಲಿ ಮಾತ್ರವಲ್ಲ ಅಮೆರಿಕದಲ್ಲೂ ಕಾಣಸಿಗುತ್ತದೆ. ಸಿಯಾಟಲ್ ನಂತಹ ಎಡಪಂಥೀಯರ ಹಿಡಿತದಲ್ಲಿರುವ ಪಟ್ಟಣಗಳ ಗೋಡೆಗಳ ಮೇಲೆ ಹಲವು ತರದ ಘೋಷಣೆಗಳು ರಾರಾಜಿಸುತ್ತವೆ. ಶ್ರೀಮಂತ ದೇಶ ಎಂದು ಕರೆಸಿಕೊಳ್ಳುವ ಆ ದೇಶದ ಹಾದಿ ಬದಿಯಲ್ಲಿ 'ನಿರಾಶ್ರಿತ, ಸಹಾಯ ಮಾಡಿ' ಎಂದು ಬರೆದುಕೊಂಡ ಅಸಂಖ್ಯ ಕಾರ್ಡ್ ದಾರರೂ ಅಮೆರಿಕದ ಶ್ರೀಮಂತಿಕೆಯ ವಿಡಂಬನೆಯಾಗಿ ತೋರುತ್ತಾರೆ.




**ಜಿ. ನಾರಾಯಣ, ಬೆಂಗಳೂರು**

- ಕಥೆಗಳು ಚೆನ್ನಾಗಿವೆ. ಬಸವರಾಜ ಪಿ.ಡೋಣೂರರ ಕಥೆ 'ಒಂದು ಆತ್ಮಹತ್ಯೆಯ ವೃತ್ತಾಂತ' ಇಂದಿನ ರಾಜಕೀಯ ನಾಯಕರ ದೊಂಬರಾಟಗಳನ್ನು ನೆನಪಿಸುತ್ತದೆ. ಆತ್ಮಚರಿತ್ರೆ ಮತ್ತು ಜೀವನಚರಿತ್ರೆಗಳು ಹೇಗೆ ವ್ಯಾವಹಾರಿಕ ಸರಕಾಗಿ ಬದಲಾಗುತ್ತಿವೆ ಎನ್ನುವುದೂ ಕಥೆಯಲ್ಲಿ ಮಾರ್ಮಿಕವಾಗಿ ಮೂಡಿಬಂದಿದೆ.

**ಬಿದರಹಳ್ಳಿ ಚನ್ನವೀರಪ್ಪ ಹಿರೇಹಡಗಲಿ**

- 'ಆತ್ಮದ ಮಾತು: ನಾನು ಹುಡುಗಿ, ಭಾಗ್ಯವಂತೆ' ಭರತನಾಟ್ಯ ನೃತ್ಯ ಕಲಾವಿದೆ ನರ್ತಕಿ ನಟರಾಜ್ ಸಂದರ್ಶನ ಸ್ಫೂರ್ತಿದಾಯಕವಾದುದು. ಅವರ ನೃತ್ಯ ಪ್ರೇಮ ಹಾಗೂ ಅದನ್ನು ಪಡೆದುಕೊಳ್ಳಲು